**ದಿನಾಂಕ:06.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 7 ನೇ ಆರೋಪಿತರ ಪರವಾಗಿ ಶ್ರೀ ಎಂ.ಸಿ.ಹೆಚ್ ವಕೀಲರಿಂದಃ**

4. ಹಾನಗಲ್ ತಾಲೂಕಿನ ಚಿಕ್ಕಹುಲ್ಲಾಳ ಗ್ರಾಮದ ಸರ್ವೇ ನಂ.9/1 ಮತ್ತು 9/2 ರ ಒಟ್ಟು 30 ಗುಂಟೆ ಜಮೀನನ್ನು ಸರ್ಕಾರದವರು ಭೂಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

5. ಆ ದಿನ ನಾನು ನಮ್ಮ ಮೇಲಾಧಿಕಾರಿಗಳ ಮೌಖಿಕ ಅನುಮತಿಯನ್ನು ಪೋನ್ ಮೂಲಕ ಪಡೆದುಕೊಂಡು ಘಟನಾ ಸ್ಥಳಕ್ಕೆ ಪಂಚನಾಮೆಗೆ ಸಹಕರಿಸುವ ಸಲುವಾಗಿ ಹೋಗಿರುತ್ತೇನೆ. ಆದರೆ ಲಿಖಿತ ಅನುಮತಿಯನ್ನು ಪಡೆದಿಲ್ಲ. ಸರ್ಕಾರದ ಕಚೇರಿಯಲ್ಲಿ ಕೆಲಸ ನಿರ್ವಹಿಸುವ ಅವಧಿಯಲ್ಲಿ ಇತರೆ ಕೆಲಸಕ್ಕಾಗಿ ಕಚೇರಿಯಿಂದ ಹೊರಗಡೆ ಹೋಗಬೇಕಾದರೆ ನಮ್ಮ ಚಲನ–ವಲನ ವಹಿಯಲ್ಲಿ ಕಾರಣ ಮತ್ತು ಸಮಯ ನಮೂದಿಸಿ ಹೋಗಬೇಕಾಗುತ್ತದೆ ಎಂದರೆ ನಿಜ. ನಾನು ಆ ದಿನ ಸ್ಥಳ ಪಂಚನಾಮೆಗೆ ಹೋಗುವ ಸಲುವಾಗಿ ಸದರಿ ವಿಚಾರವನ್ನು ಮತ್ತು ಸಮಯವನ್ನು ನಮ್ಮ ಚಲನ–ವಲನ ವಹಿಯಲ್ಲಿ ನಮೂದಿಸಿಲ್ಲ.

6. ಘಟನಾ ಸ್ಥಳಕ್ಕೆ ಪಂಚನಾಮೆಗಾಗಿ ಬನ್ನಿ ಎಂದು ಹೇಳಲು ನನಗೆ ಪೊಲೀಸರು ನೋಟೀಸನ್ನು ಕೊಟ್ಟಿರುವುದಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಪೋಟೋ ತೆಗೆಸಿಕೊಂಡಿರುತ್ತೇನೆ ಎಂದರೆ ನಿಜ. ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ನಿಜ. ಚಪ್ಪಲಿ, ಹಾರೆ ಮತ್ತು ಕೊಡ್ಲಿಯನ್ನು ಪಿರ್ಯಾದಿಯ ಸಂಬಂಧಿಕ ಗೋವಿಂದಪ್ಪ ತಂದು ಕೊಟ್ಟರು ಎಂದರೆ ನಿಜ. ಪೊಲೀಸರು ಸಹಿ ಮಾಡು ಎಂದಿದ್ದರಿಂದ ನಾನು ಸ್ಥಳ ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದರೆ ನಿಜ. ಪೊಲೀಸರು ನನ್ನ ಸಮಕ್ಷಮ ಮು.ಮಾ–1 ರಿಂದ 3 ರ ವಸ್ತುಗಳನ್ನು ವಶಪಡಿಸಿಕೊಳ್ಳದೇ ಇದ್ದರೂ ಸಹ ಪೊಲೀಸರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ನಕ್ಷೆಯನ್ನು ತಯಾರಿಸಿಲ್ಲ ಎಂದರೆ ನಿಜ.

7. ನನಗೆ ಘಟನಾ ಸ್ಥಳದ ಪಂಚನಾಮೆ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಪೊಲೀಸರ ಮಾತನ್ನು ಕೇಳಿಕೊಂಡು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.